SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UINIVERSITY LIBRARY & LEARNING RESOURCE CENTRE

Online Newspaper Clipping Service
Dated, Saturday, 08th April – 2017

THE HINDU



# Health of 'patients' stumps MCI team

TANU KULKARNI
BENGALURU

Members of the Medical Council of India (MCI), who were on an inspection of some of the private medical colleges in Karnataka, were surprised when they entered the wards of their teaching hospitals. Not only were the number of patients much lower than what the records showed, but many looked quite in the pink of health to be in-patients.

The executive committee of the MCI, during a recent meeting, recommended that three private colleges – in Tumakuru, Kolar Gold Fields, and Devanahalli in Bengaluru – be debarred from admitting students for two academic years (2017-2018 and 2018-2019) as they were not able to fulfil the requirements mandated to run a college, which includes patient intake. All these colleges had shortage of faculty.

In addition, one more college has been recommended for similar action for not having the necessary infrastructure and faculty.

CONTINUED ON ▸ PAGE 4

# Health of 'patients' stumps MCI team

CONTINUED FROM PAGE 1

It is MCI which conducts periodic inspections of medical colleges and in turn recommends to the Ministry of Health and Family Welfare on permission to start or renew colleges.

The three colleges – Shridevi Institute of Medical Sciences and Research Hospital, Tumakuru; Sambhram Institute of Medical Sciences and Research, KGF, and the one at Devanahalli run by Akash Education and Development Trust – were given permission to run courses for 2016-17 by the Supreme Court-mandated oversight committee on the condition that they would fulfil all the conditions. However, the committee has observed in the minutes of the executive committee meeting, that Sambhram Institute of Medical Sciences and Research had 17 patients admitted in the paediatrics ward who were all from an orphanage with "very minor complaints which did not merit admission". Similar was the situation in other wards. Also, while the institute had submitted reports stating that the bed occupancy was 62%, on the day of the assessment, it was found to be 17% at 10 a.m. The committee has called this claim "highly exaggerated".

At Shridevi Institute of Medical Sciences and Research Hospital many patients admitted in the general medicine ward were those who had anaemia, gastritis, URI or gastroenteritis, while the orthopaedics ward had patients who were admitted for knee pain or lower backache, which the committee notes "could have been treated as outpatients". The committee also found that signatures on the attendance sheet of some faculty members and residents differed in the morning and afternoon during verification.

The committee that inspected the institute at Devanahalli found that a patient who "looked healthy" was admitted for a fortnight in the general medicine ward without any diagnosis and treatment. It also found a junior resident in the department of general surgery was working at another institute as a senior resident for the same academic year.

Akash Education and Development Trust authorities were unavailable for comment despite repeated calls, while an official from the Sambhram institute said they had not seen the report and did not wish to comment.

## State to lose 300 medical seats?

STAFF REPORTER
BENGALURU

The executive committee of the Medical Council of India (MCI) has decided not to recommend renewal of permission for two government medical colleges. These are Chamarajanagar Institute of Medical Sciences and Karwar Institute of Medical Sciences, which were supposed to admit the second batch of 150 seats each for the 2017-18 academic year. Medical Education Minister Sharanprakash R. Patil said, "They usually give us some more time for compliance and we will communicate with the MCI and do the needful."

# MCI debars three colleges for fake patients

RASHMI BELUR @ Bengaluru

WHEN a Medical Council of India (MCI) team inspected some medical colleges in Karnataka, they found some had adopted brazen methods to fill up patients: people who underwent open surgeries but showed no visible incision marks, patients admitted for more than a month for ailments that were non-existent, children brought from an orphanage and admitted in the paediatrics ward.

These irregularities have forced the MCI to disaffiliate three private medical colleges: Sridevi Medical College, Tumakuru; Akash Institute of Medical Sciences, Devanahalli; and Sambram Medical College Kolar. Three more colleges, including two government colleges, have also been denied renewal of affiliation based on infrastructure and other deficiencies. These are Chamrajnagar Institute of Medical Sciences and Karwar Institute of Medical Sciences ans private Al Ameen College of Vijayapura.

In its report, the committee said during their inspections last year they encountered "healthy persons" posing as patients at wards. "Many patients who were not genuine and did not require admission were admitted in wards of General Medicine, General Surgery, TB & Chest, Skin & VD and Orthopaedics. In General Medicine ward, a patient named Satish (Reg # 51007) was admitted on February 24, 2016 without diagnosis and was undergoing treatment till March 11, 2016. He looked healthy."

In another college, it wrote, "All 17 patients admitted in paediatrics ward were from an orphanage with very minor complaints which did not merit admission." The report said that on day of inspection there were no surgeries listed. Several entries were made in operation theatre (OT) register for thyroid and appendicitis surgeries, but no patients could be traced, the report added. "In post-operative ward there were five patients, of whom two were examined. They were reported to have right heel abscess drainage and total abdominal hysterectomy but no incision mark was observed... Data in OT registers were manipulated." Another college did not even have a labour room.

Based on the report, the executive committee, which met in January decided not to recommend renewal of affiliation of these colleges for the next two years and the information was uploaded on MCI website. P6

THE NEW INDIAN EXPRESS

Pg.No.06

# Medical colleges didn't have real patients, faculty

EXPRESS NEWS SERVICE @Bengaluru

WHEN a Medical Council of India (MCI) team inspected some medical colleges in Karnataka, they found some had adopted brazen methods to fill up patients.

According to MCI sources, all three colleges were given conditional approval last year and had given undertaking that if they failed to abide, they would lose affiliation. "These colleges manipulated rules in many ways. No proper facilities, no genuine patients, no proper infrastructure and faculty. So, we have decided not to recommend to Central government for renewal of affiliation," said a source from MCI.

Sridevi Medical College, Tumakuru, has been a serial offender. In the first year that it was given conditional approval, the college admitted 150 students. It had no permission to take fresh students the next year, but it did so illegally. Later students went to court where a direction was given to state government to replace those students admitted through CET rankings. Following that, in CET 2016, state government allotted seats again for first year for those students under government quota.

Similarly, Sambram College's affiliation had earlier been denied by MCI but it managed to get the Central government's nod. It has now been debarred for two years.

Chamrajnagar Institute of Medical Sciences and Karwar Institute of Medical Sciences are two government colleges that have been debarred. But medical education department officials said these were conditional and permission would be granted soon. "Another executive committee meeting of MCI is scheduled next week and as we have complied with everything, we are confident of getting renewal," said Dr Sachidanand, director, medical education.

Rajiv Gandhi University of Health Sciences (RGUHS) conducts local inspection of medical colleges every year and based on its report, institutions apply for MCI renewal. Dr K S Ravindranath, Vice Chancellor, RGUHS, said, "Colleges where overseeing committee gave conditional approval were directly visited by MCI."

# ಖಿನ್ನತೆಗೆ ಗುರಿಯಾದವರಿಗೆ ಸೂಕ್ತ ಚಿಕಿತ್ಸೆ ಅಗತ್ಯ

## ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಉಪಕುಲಪತಿ

• **ಕನ್ನಡಪ್ರಭ ವಾರ್ತೆ** ಕೋಲಾರ

ನಗರದ ಹೊರವಲಯದಲ್ಲಿರುವ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಶ್ರೀದೇವರಾಜ್ ಅರಸ್ ವೈದ್ಯಕೀಯ ಮಹಾವಿದ್ಯಾಲಯಲ್ಲಿ ಸಮುದಾಯ ವೈದ್ಯಶಾಸ್ತ್ರ ವಿಭಾಗ ಹಾಗೂ ಮಾನಸಿಕ ರೋಗ ವಿಭಾಗದ ಸಂಯುಕ್ತಾಶ್ರಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆಯನ್ನು ಖಿನ್ನತೆ ಕುರಿತು ಮಾತನಾಡೋಣ ಎಂಬ ಮುಖ್ಯ ಘೋಷಣೆಯೊಂದಿಗೆ ಆಯೋಜಿಸಲಾಗಿತ್ತು.

ಶ್ರೀದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಉಪಕುಲಪತಿ ರಘುವೀರ್ ಸಿ.ವಿ. ಉದ್ಘಾಟಿಸಿ ಮಾತನಾಡುತ್ತಾ ಖಿನ್ನತೆಯ ಪ್ರಾಮುಖ್ಯತೆಯನ್ನು ಹಾಗೂ ಪರಿಣಾಮಗಳನ್ನು ವಿವರಿಸಿದರು. ಖಿನ್ನತೆಯನ್ನು ಗುರುತಿಸುವಲ್ಲಿ ಹಾಗೂ ಕಾಯಿಲೆ ಇದ್ದವರಿಗೆ ಸರಿಯಾದ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುವಲ್ಲಿ ಸಾರ್ವಜನಿಕರ ಹಾಗೂ ವೈದ್ಯಕೀಯ ಸಿಬ್ಬಂದಿಯ ಜವಾಬ್ದಾರಿಯನ್ನು ಹೇಳಿದರು.



ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಡಾ.ರಘುವೀರ್, ಡಾ.ಕೃಷ್ಣಪ್ರಸಾದ್ ಮುತ್ತಿತರರು

**ಮೂಢ ನಂಬಿಕೆಗೆ ಬಲಿಯಾಗದಿರಿ:** ಮಾನಸಿಕ ರೋಗ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥ ಡಾ. ಮೋಹನ್‌ರೆಡ್ಡಿ ಮಾತನಾಡಿ, ಖಿನ್ನತೆಯ ಬಗ್ಗೆ ಮಾತನಾಡಿ, ಮಾನಸಿಕ ಕಾಯಿಲೆಗಳು ಬಂದಾಗ ಜನಸಾಮಾನ್ಯರು ಮೂಢನಂಬಿಕೆಗಳಿಗೆ ಗುರಿಯಾಗಿ ವೈದ್ಯರ ಹತ್ತಿರ ಬರದೆ ಮಾಟ ಮಂತ್ರವನ್ನು ಮಾಡಿಸುತ್ತಾರೆ. ಕಾಯಿಲೆ ಉಲ್ಬಣವಾದಾಗ ವೈದ್ಯರ ಹತ್ತಿರ ಬರುತ್ತಾರೆ. ಇದರಿಂದ ಕಾಯಿಲೆಯನ್ನು ಗುರುತಿಸುವಲ್ಲಿ ಹಾಗೂ ಚಿಕಿತ್ಸೆಯನ್ನು ನೀಡುವಲ್ಲಿ ವಿಳಂಬವಾಗಿ ಕೆಲವು ಸಂದರ್ಭದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಹೋಗಬಹುದು ಎಂದರು.

ಪ್ರಾಂಶುಪಾಲ ಡಾ.ಹರೇಂದ್ರಕುಮಾರ್.ಎಂ.ಎಲ್, ನಿರ್ದೇಶಕ ಡಾ.ಎಸ್.ಆರ್. ಪ್ರಸಾದ್ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಜಾವಾಣಿ



# ಪಿಜಿ ವೈದ್ಯಕೀಯ, ದಂತ ವೈದ್ಯಕೀಯ ಸೀಟು ಆಯ್ಕೆ ದಾಖಲಿಸಲು ಅವಕಾಶ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಹಾಗೂ ಡಿಪ್ಲೊಮಾ ಕೋರ್ಸ್‌ಗಳಿಗೆ 2017-18ನೇ ಸಾಲಿನ ಪ್ರವೇಶಕ್ಕಾಗಿ ನಡೆಯುವ ಏಕರೂಪದ ಕೌನ್ಸೆಲಿಂಗ್‌ಗೆ ಸೀಟು ಆಯ್ಕೆ ದಾಖಲಿಸಲು ಅವಕಾಶ ನೀಡಲಾಗಿದೆ.

ಆನ್‌ಲೈನ್ ಮೂಲಕ ಸೀಟು ಆಯ್ಕೆ ದಾಖಲಿಸಲು ಏಪ್ರಿಲ್ 10ರ ಬೆಳಿಗ್ಗೆ 10ರವರೆಗೂ ಅವಕಾಶ ಇದೆ. ಏಪ್ರಿಲ್ 11ರ ಮಧ್ಯಾಹ್ನ 2 ಗಂಟೆಗೆ ಅಣಕು ಸೀಟು ಹಂಚಿಕೆ ಮಾಡಲಾಗುತ್ತದೆ. ಮತ್ತೆ ಅಂದು ಸಂಜೆ 4ರಿಂದ ಏಪ್ರಿಲ್ 13ರ ಬೆಳಿಗ್ಗೆ 10ರವರೆಗೆ ಸೀಟು ಆಯ್ಕೆ ದಾಖಲಿಸಲು ಅವಕಾಶ ನೀಡಲಾಗುತ್ತದೆ.

ಇದೇ 15ರಂದು ಮಧ್ಯಾಹ್ನ 12ಕ್ಕೆ ಸೀಟು ಹಂಚಿಕೆ ಮಾಡಲಾಗುತ್ತದೆ. ಸೀಟು ಆಯ್ಕೆ ಮತ್ತು ಶುಲ್ಕ ಪಾವತಿಸಲು ಇದೇ 19ರ ಸಂಜೆ 4ರವರೆಗೆ ಅವಕಾಶ ಇದೆ. ಇದೇ 22ರೊಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬಹುದು.

ಈಗಾಗಲೇ ದಾಖಲಾತಿ ಪರಿಶೀಲನೆಗೆ ಹಾಜರಾಗಿ ಅರ್ಹತೆ ಪಡೆದ ವಿದ್ಯಾರ್ಥಿಗಳು ತಮ್ಮ ಆಯ್ಕೆ ದಾಖಲಿಸಬಹುದು. ಕಾಲೇಜುವಾರು ಲಭ್ಯ ಇರುವ ಸೀಟುಗಳ ವಿವರವನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ (http://kea.kar.nic.in) ಪ್ರಕಟಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

## ಕನ್ನಡಿಗರಿಗೆ ಸೀಟು: ಮಸೂದೆಗೆ ಅಂಕಿತ

ಬೆಂಗಳೂರು: ರಾಜ್ಯದ ಎಲ್ಲ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳು ಶೇ 50ರಷ್ಟು ಸೀಟುಗಳನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಿಡುವ ಮಸೂದೆಗೆ ರಾಜ್ಯಪಾಲರು ಶುಕ್ರವಾರ ಅಂಕಿತ ಹಾಕಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ಮಸೂದೆಗೆ ಉಭಯ ಸದನಗಳೂ ಅಂಗೀಕಾರ ನೀಡಿದ್ದವು.

ಏಕರೂಪದ ಕೌನ್ಸೆಲಿಂಗ್‌ನಲ್ಲಿಯೇ ಎಲ್ಲ ಸೀಟುಗಳನ್ನು ಹಂಚಿಕೆ ಮಾಡಬೇಕೆಂಬ ನಿಯಮವನ್ನು ಮಸೂದೆ ಒಳಗೊಂಡಿದೆ.

# ಕನ್ನಡಕ್ಕೆ ಮಣ್ಣೆರಚುತ್ತಿರುವ ಖಾಸಗಿ, ಡೀಮ್ಡ್ ವಿವಿ!

## 4 ಸೆಮಿಸ್ಟರ್‌ಗಳಿಂದ 2 ಸೆಮಿಸ್ಟರ್‌ಗಿಳಿದ ಕನ್ನಡ ಪಾಠ

**ಬಿ ಎಸ್ ಜಯಪ್ರಕಾಶ ನಾರಾಯಣ**
ಬೆಂಗಳೂರು

ರಾಜ್ಯದ ಖಾಸಗಿ ಮತ್ತು ಡೀಮ್ಡ್ ವಿ.ವಿ.ಗಳು, ಸ್ವಾಯತ್ತ ಕಾಲೇಜುಗಳು ನಿಧಾನವಾಗಿ ಕನ್ನಡ ಭಾಷಾಪತ್ಯವನ್ನೇ ಮೂಲೆಗುಂಪು ಮಾಡುತ್ತಿರುವ ಆಘಾತಕಾರಿ ವಿದ್ಯಮಾನ ಬೆಳಕಿಗೆ ಬಂದಿದೆ.

ಉನ್ನತ ಶಿಕ್ಷಣದ ನಿಯಮಗಳ ಪ್ರಕಾರ, ಒಟ್ಟು ಆರು ಸೆಮಿಸ್ಟರ್‌ಗಳನ್ನುಳ್ಳ ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿಬಿಎಂ ಮತ್ತು ಬಿಸಿಎ ಪದವಿಗಳ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಎರಡು ಭಾಷಾಪತ್ಯಗಳನ್ನು ಕಡ್ಡಾಯವಾಗಿ ಬೋಧಿಸಲೇಬೇಕು. ಹೀಗೆ ನಮ್ಮಲ್ಲಿರುವ ಭಾಷಾಪತ್ಯಗಳಲ್ಲಿ ಕನ್ನಡ, ಸಂಸ್ಕೃತ, ಉರ್ದು, ತೆಲುಗು, ತಮಿಳು ಮತ್ತು ಮಲಯಾಳಂ ಇವೆ. ಇವುಗಳ ಜತೆಗೆ ಇಂಗ್ಲಿಷ್ ಕೂಡ ಇರುತ್ತದೆ.

ಆದರೆ, 'ಸ್ವಾಯತ್ತೆ'ಯ ಹೆಸರಿನಲ್ಲಿ ಸಂಪೂರ್ಣ ಸ್ವತಂತ್ರವಾಗಿರುವ ಕೆಲವು ವಿ.ವಿ.ಗಳು ಮತ್ತು ಶಿಕ್ಷಣ ಸಂಸ್ಥೆಗಳು ಕನ್ನಡ ಸೇರಿದಂತೆ ಉಳಿದ ಭಾಷೆಗಳನ್ನೆಲ್ಲ ಕಳೆದ 2 ವರ್ಷಗಳಿಂದ ಸದ್ದಿಲ್ಲದೆ 2 ಸೆಮಿಸ್ಟರ್‌ಗಳಿಗೆ ಇಳಿಸಿವೆ. ಆದರೆ, ಇಂಗ್ಲಿಷ್ ಭಾಷಾಪತ್ಯವನ್ನು ಮಾತ್ರ ಎಲ್ಲ ಕಡೆಯೂ ನಾಲ್ಕು ಸೆಮಿಸ್ಟರ್ ಅವಧಿಗೆ ಬೋಧಿಸುತ್ತಿವೆ!

**ಕನ್ನಡ ಅಸ್ಮಿತೆ**

**ಈ ಸಮಸ್ಯೆ ಕುರಿತು ಚರ್ಚಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸದ್ಯದಲ್ಲೇ ಸಮಾಲೋಚನಾ ಸಭೆ ನಡೆಸಲಿದೆ. ಇದರಲ್ಲಿ ಉನ್ನತ ಶಿಕ್ಷಣ ಸಚಿವರು, ಡೀಮ್ಡ್ ವಿ.ವಿ.ಗಳ ಕುಲಪತಿಗಳು, ರಾಜ್ಯದ ವಿ.ವಿ.ಗಳ ಕನ್ನಡ ವಿಭಾಗಗಳ ನಿರ್ದೇಶಕರು ಇರಲಿದ್ದಾರೆ. ಹೋರಾಟದ ನೇತೃತ್ವವನ್ನು ಪ್ರಾಧಿಕಾರವೇ ವಹಿಸಿಕೊಳ್ಳಲಿದೆ.**

**-ಎಸ್ ಜಿ ಸಿದ್ದರಾಮಯ್ಯ**
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

---

ಇದರ ಜತೆಗೆ ಇವೆಲ್ಲವೂ ಇನ್ನೊಂದು ತಂತ್ರವನ್ನೂ ಅನುಸರಿಸುತ್ತಿವೆ. ಸರಕಾರಿ ವಿ.ವಿ.ಗಳಲ್ಲಿ ಪ್ರತಿಯೊಂದು ಪದವಿ ಕೋರ್ಸಿಗೂ ಹೊಂದುವಂಥ ಪ್ರತ್ಯೇಕ ಭಾಷಾಪತ್ಯಗಳು ಇರುತ್ತವೆ. ಆದರೆ ಖಾಸಗಿ ಮತ್ತು ಡೀಮ್ಡ್ ವಿ.ವಿ.ಗಳು, ಬಿ.ಎ., ಬಿ.ಎಸ್ಸಿ ಮತ್ತು ಬಿಸಿಎ ಈ ಮೂರಕ್ಕೂ ಒಂದೇ ಕನ್ನಡ ಪತ್ಯವನ್ನು ಪಾಠ ಮಾಡುತ್ತಿವೆ.

»11

ವಿಜಯ ಕರ್ನಾಟಕ



# ಕನ್ನಡಕ್ಕೆ ಮಣ್ಣೆರಚುತ್ತಿರುವ ಖಾಸಗಿ, ಡೀಮ್ಡ್ ವಿವಿ!

» ಮೊದಲ ಪುಟದಿಂದ

ಹಾಗೆಯೇ ಇವು ಬಿ.ಕಾಂ, ಮತ್ತು ಬಿಬಿಎಂ ಕೋರ್ಸ್‌ಗಳನ್ನು ಒಂದುಮಾಡಿ, ಅಲ್ಲೂ ಒಂದೇ ಕನ್ನಡ ಪಠ್ಯವನ್ನು ಅಳವಡಿಸಿಕೊಂಡಿರುವುದು ಗಮನಕ್ಕೆ ಬಂದಿದೆ.

ಈ ಬಗ್ಗೆ ಮಾತನಾಡಿರುವ ಬೆಂಗಳೂರು ವಿವಿ ಕಾಲೇಜು ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಬೆಳಕೆರೆ ಲಿಂಗರಾಜಯ್ಯ, ''ಈ ವಿ.ವಿಗಳು ಮತ್ತು ಸ್ವಾಯತ್ತ ಕಾಲೇಜುಗಳ ಮೇಲೆ ಸರಕಾರಕ್ಕೆ ಕೇವಲ ಆಡಳಿತಾತ್ಮಕ ನಿಯಂತ್ರಣವಿದೆ. ಅಲ್ಲಿಯ ಪಠ್ಯ, ಬೋಧನಾ ಸ್ವರೂಪ ಇತ್ಯಾದಿಗಳ ಮೇಲೆ ಸರಕಾರಕ್ಕೆ ಯಾವ ಅಧಿಕಾರವೂ ಇಲ್ಲ, ಇದನ್ನು ದುರುಪಯೋಗಪಡಿಸಿಕೊಂಡು ಹೀಗೆಲ್ಲ ಮಾಡಲಾಗುತ್ತಿದೆ. ಇದು ಹೀಗೆಯೇ ಮುಂದುವರಿದರೆ ನಗರ ಪ್ರದೇಶಗಳ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡವೇ ನಾಪತ್ತೆಯಾಗುವ ದಿನಗಳು ದೂರವಿಲ್ಲ,'' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

''ಈ ಸಂಸ್ಥೆಗಳೆಲ್ಲವೂ ಹೀಗೆ ಕನ್ನಡವನ್ನು ಮೂಲೆಗುಂಪು ಮಾಡುವ ಮೂಲಕ ಕನ್ನಡ ಬೋಧಕರ ವರ್ಕ್‌ಲೋಡ್‌ಅನ್ನು ಪ್ರಜ್ಞಾಪೂರ್ವಕವಾಗಿ ಕಡಿಮೆ ಮಾಡುತ್ತಿವೆ. ಅಂದರೆ, ಮೂವರು ಕನ್ನಡ ಬೋಧಕರು ಇರಬೇಕಾದ ಕಡೆ ಕೇವಲ ಒಬ್ಬರನ್ನು ಮಾತ್ರ ಅವು ನೇಮಿಸಿಕೊಳ್ಳುತ್ತಿವೆ. ಉಳಿದ ದೇಶೀಯ ಭಾಷೆಗಳಿಗೂ ಇದೇ ಗತಿಯಾಗಿದೆ. ಆದ್ದರಿಂದ ಸರಕಾರವು ಈ ಸಂಸ್ಥೆಗಳಿಗೆ ಭಾಷಾಪಠ್ಯದ ವಿಷಯದಲ್ಲಿ ಒಂದು ಸ್ಪಷ್ಟ ನಿರ್ದೇಶನ ನೀಡಬೇಕು,'' ಎಂದು ಅವರು ಆಗ್ರಹಿಸಿದ್ದಾರೆ.

## ಮೇನಲ್ಲಿ ಸಮಾವೇಶ

ಈ ಸಮಸ್ಯೆ ಕೇವಲ ಬೆಂಗಳೂರು ನಗರದ ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ರಾಜ್ಯದ ಎಲ್ಲ ಕಡೆಗಳಲ್ಲೂ ಇದು ಪಿಡುಗಾಗಿ ಹಬ್ಬುತ್ತಿದೆ. ಹೀಗಾಗಿ ಬೆಂವಿವಿ ಕಾಲೇಜು ಕನ್ನಡ ಅಧ್ಯಾಪಕರ ಸಂಘವು ಮೇ ಮೊದಲ ಭಾಗದಲ್ಲಿ ರಾಜ್ಯದ ಎಲ್ಲ ವಿ.ವಿ.ಗಳ ಕನ್ನಡ ಸಂಘಗಳ ಜತೆ ಬೆಂಗಳೂರಿನಲ್ಲಿ ಸಮಾವೇಶ ನಡೆಸಲು ತೀರ್ಮಾನಿಸಿದೆ.

''ಈ ವಿಷಯವನ್ನು ಉನ್ನತ ಶಿಕ್ಷಣ ಸಚಿವರು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಗಮನಕ್ಕೂ ತರಲಾಗುವುದು. ಈ ಹೋರಾಟಕ್ಕೆ ಕನ್ನಡ ಲೇಖಕರು ಮತ್ತು ಕನ್ನಡ ಪರವಿರುವ ಸಂಘಸಂಸ್ಥೆಗಳನ್ನೂ ಸೇರಿಸಿಕೊಳ್ಳಲಾಗುವುದು. ಈ ಸಂಬಂಧ ಈಗಾಗಲೇ 2-3 ಸುತ್ತಿನ ಚರ್ಚೆಗಳು ನಡೆದಿವೆ. ಇತ್ತೀಚಿನ ಸಭೆ ಬೆಂಗಳೂರಿನಲ್ಲಿ ನಡೆದು, ಈ ಸಮಸ್ಯೆಯನ್ನು ಕುರಿತು ವಿಷದವಾಗಿ ಚರ್ಚಿಸಲಾಗಿದೆ,'' ಎಂದು ಡಾ.ಲಿಂಗರಾಜಯ್ಯ ತಿಳಿಸಿದ್ದಾರೆ.

# ನೀಟ್ ಪರೀಕ್ಷೆಗೆ ಪೂರಕ ವಿಧೇಯಕಕ್ಕೆ ಅಂಕಿತ

■ **ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯ , ದಂತ ವೈದ್ಯ ಕೋರ್ಸ್ ಪ್ರವೇಶ ಸಂಬಂಧ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ನೀಟ್ ಪರೀಕ್ಷೆಗೆ ಪೂರಕವಾದ 'ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ತಿದ್ದುಪಡಿ) ವಿಧೇಯಕ-2017'ಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಈ ಸಂಬಂಧ ರಾಜ್ಯಪತ್ರದಲ್ಲಿ ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ.

ನೀಟ್ ಬಳಿಕ ಸೀಟು ಹಂಚಿಕೆ ಹಾಗೂ ಶುಲ್ಕ ನಿಗದಿಗೆ ಈ ಕಾಯಿದೆ ಸಹಕರಿಸಲಿದೆ. ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳ ಹಿತ ಲಕ್ಷ್ಯದಲ್ಲಿ ಇರಿಸಿಕೊಂಡು ಸೀಟು ಒದಗಿಸಲು ಈ ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಖಾಸಗಿ, ಡೀಮ್ಡ್ ವಿವಿ ಸೇರಿದಂತೆ ರಾಜ್ಯದ ಎಲ್ಲ ಮೆಡಿಕಲ್ ಕಾಲೇಜುಗಳ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನಡೆಸಬೇಕು ಎನ್ನುವ ಅಂಶವೂ ಇದೆ.

ಎಂಜಿನಿಯರಿಂಗ್ ಪ್ರವೇಶಕ್ಕೂ ರಾಷ್ಟ್ರ ಮಟ್ಟದ ಏಕರೂಪ ಪರೀಕ್ಷೆ ನಡೆಸಬೇಕು ಎನ್ನುವ ಪ್ರಸ್ತಾವವಿದೆ. ಇದು ಜಾರಿಯಾದಾಗಲೂ ಎಂಜಿನಿಯರಿಂಗ್ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿಗೆ ಈ ಕಾಯಿದೆಯಡಿ ಕ್ರಮ ಕೈಗೊಳ್ಳಲು ಸಾಧ್ಯವಾಗಲಿದೆ.

# ಪಿಜಿಸಿಇಟಿ: ಆಯ್ಕೆ ದಾಖಲೆಗೆ ಅವಕಾಶ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2017-18ನೇ ಸಾಲಿನ ಸ್ನಾತಕೋತ್ತರ ವೈದ್ಯ, ದಂತ ವೈದ್ಯ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಇಚ್ಛೆ/ ಆಯ್ಕೆ ದಾಖಲಿಸಲು ಅವಕಾಶ ಕಲ್ಪಿಸಿದೆ. ಈ ಪ್ರಕ್ರಿಯೆ ಏ. 10 ರಂದು ಮುಕ್ತಾಯವಾಗಲಿದೆ.

ಈಗಾಗಲೇ ದಾಖಲೆ ಪರಿಶೀಲನೆಗೆ ಹಾಜರಾಗಿ,ಅರ್ಹತೆ ಪಡೆದಿರುವ ಅಭ್ಯರ್ಥಿಗಳು ತಮ್ಮ ಆಯ್ಕೆ/ ಇಚ್ಛೆ ದಾಖಲಿಸಬಹುದು. ನಾನಾ ಕಾಲೇಜುಗಳ ಸೀಟು ಹಂಚಿಕೆ ಹಾಗೂ ಶುಲ್ಕ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬಹುದಾದ ವೆಬ್‌ಸೈಟ್ ವಿಳಾಸ: http:// kea.kar.nic.in

ಅಂತರಂಗ



# ಖಿನ್ನತೆ ಕಾಯಿಲೆ ಬಗ್ಗೆ ಜನರಲ್ಲಿ ಅರಿವು ಅಗತ್ಯ: ಡಾ. ಸಿ.ವಿ ರಘುವೀರ್

ಕೋಲಾರ,ಏ.7– ನಗರದ ಹೊರವಲಯದಲ್ಲಿರುವ ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಶ್ರೀ ದೇವರಾಜ್ ಅರಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸಮುದಾಯ ವೈದ್ಯಶಾಸ್ತ್ರ ವಿಭಾಗ ಹಾಗೂ ಮಾನಸಿಕ ರೋಗ ವಿಭಾಗದ ಸಂಯುಕ್ತಾಶ್ರಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆಯನ್ನು "ಖಿನ್ನತೆ ಕುರಿತು ಮಾತನಾಡೋಣ" ಎಂಬ ಮುಖ್ಯ ಘೋಷಣೆಯೊಂದಿಗೆ ಆಯೋಜಿಸಲಾಗಿತ್ತು.

ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಉಪಕುಲಪತಿ ರಘುವೀರ್ ಸಿ.ವಿ. ಉದ್ಘಾಟಿಸಿ ಮಾತನಾಡುತ್ತಾ ಖಿನ್ನತೆಯ ಪ್ರಾಮುಖ್ಯತೆಯನ್ನು ಹಾಗೂ ಪರಿಣಾಮಗಳನ್ನು ವಿವರಿಸಿದರು. ಖಿನ್ನತೆಯನ್ನು ಗುರುತಿಸುವಲ್ಲಿ ಹಾಗೂ ಕಾಯಿಲೆ ಇದ್ದವರಿಗೆ ಸರಿಯಾದ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುವಲ್ಲಿ ಸಾರ್ವಜನಿಕರ ಹಾಗೂ ವೈದ್ಯಕೀಯ ಸಿಬ್ಬಂದಿಯ ಜವಾಬ್ದಾರಿಯನ್ನು ಒತ್ತಿಹೇಳಿದರು.

ಈ ಕಾರ್ಯಕ್ರಮದಲ್ಲಿ ಖಿನ್ನತೆ ಬಗ್ಗೆ ಮಾತನಾಡೋಣ ಎಂಬ ವಿಷಯದ ಬಗ್ಗೆ ನಿಮಾನ್ಸ್ ಮಾನಸಿಕ ರೋಗ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಕೃಷ್ಣಪ್ರಸಾದ್ ಮತನಾಡುತ್ತಾ ಖಿನ್ನತೆಯನ್ನು ಗುರುತಿಸಲು ನಿರಂತರವಾದ ದುಃಖ, ಚಟುವಟಿಕೆ ಗಳಲ್ಲಿ ಉತ್ಸಾಹ ಇಲ್ಲದಿರುವುದು ಹಾಗೂ ದೈನಂದಿನ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಾಗದೆ ಇರುವುದು ಇಂತಹ ಲಕ್ಷಣಗಳು ಎರಡು ವಾರಕ್ಕಿಂತಲೂ ಜಾಸ್ತಿ ಇದ್ದಲ್ಲಿ ಸೂಕ್ತ ವೈದ್ಯರನ್ನು ಕಾಣಬೇಕು ಎಂದು ತಿಳಿಸಿದರು. ಖಿನ್ನತೆ ಎಂದರೇನು? ಯಾರಲ್ಲಿ ಹೆಚ್ಚಾಗಿ ಕಂಡುಬರುತ್ತದೆ? ಮತ್ತು ಕಾಯಿಲೆ ಇದ್ದಾಗ ಏನು ಮಾಡಬೇಕು ಎಂಬ ವಿಷಯಗಳ ಬಗ್ಗೆ ತಿಳಿಸಿಕೊಟ್ಟ ಅವರು ಕಾಯಿಲೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮುಡಿಸಬೇಕು ಹಾಗೂ ಈ ಕಾಯಿಲೆ ಇದ್ದವರಿಗೆ ಸರಿಯಾದ ಸಲಹೆ ಸೂಚನೆಗಳನ್ನು ನೀಡಬೇಕು ಎಂದರು.

ಮಾನಸಿಕ ರೋಗ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥ ಡಾ॥ ಮೋಹನ್‌ರೆಡ್ಡಿ ಮಾತನಾಡಿ ಖಿನ್ನತೆಯ ಬಗ್ಗೆ ಕನ್ನಡದಲ್ಲಿ ಮಾತನಾಡಿದರು. ಮಾನಸಿಕ ಕಾಯಿಲೆಗಳು ಬಂದಾಗ ಜನಸಾಮಾನ್ಯರು ಮೂಡನಂಬಿಕೆಗಳಿಗೆ ಗುರಿಯಾಗಿ ವೈದ್ಯರ ಹತ್ತಿರ ಬರದೆ ಮಾಟ ಮಂತ್ರವನ್ನು ಮಾಡಿಸುತ್ತಾರೆ. ಕಾಯಿಲೆ ಉಲ್ಬಣವಾದಾಗ ವೈದ್ಯರ ಹತ್ತಿರ ಬರುತ್ತಾರೆ. ಇದರಿಂದ ಕಾಯಿಲೆಯನ್ನು ಗುರುತಿಸುವಲ್ಲಿ ಹಾಗೂ ಚಿಕಿತ್ಸೆಯನ್ನು ನೀಡುವಲ್ಲಿ ವಿಳಂಬವಾಗಿ ಕೆಲವು ಸಮಯಚಿಕಿತ್ಸೆ ಫಲಕಾರಿಯಾಗದೆ ಹೋಗಬಹುದು ಎಂದು ತಿಳಿಸಿದರು.

ಶ್ರೀ ದೇವರಾಜ್ ಅರಸ್ ವೈದ್ಯಕೀಯ ಮಹಾವಿದ್ಯಾಲಯ ಪ್ರಾಂಶುಪಾಲ ಡಾ॥ ಹರೇಂದ್ರ ಕುಮಾರ್. ಎಂ.ಎಲ್, ಸ್ನಾತಕೋತ್ತರ ವಿಭಾಗದ ನಿರ್ದೇಶಕ ಡಾ॥ ಎಸ್.ಆರ್. ಪ್ರಸಾದ್, ವೈದ್ಯಕೀಯ ಹಾಗೂ ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಮತ್ತು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಮುದಾಯ ವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ॥ ರಂಗನಾಥ್ ಬಿ.ಜಿ. ಸ್ವಾಗತಿಸಿ, ಸಮುದಾಯ ವೈದ್ಯಶಾಸ್ತ್ರ ವಿಭಾಗದ ಡಾ॥ ಪ್ರಾಧ್ಯಾಪಕ ಮುನಿನಾರಾಯಣ ನಿರೂಪಿಸಿ, ವಂದಿಸಿದರು. ಹಾಗೂ ಈ ಕಾರ್ಯಕ್ರಮವು ಒಂದು ದಿವಸಕ್ಕೆ ಸೀಮಿತವಾಗದೆ ವರ್ಷಪೂರ್ತಿ ಖಿನ್ನತೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕೆಂದು ಹೇಳಿದರು.